ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 6, January - February 2025, Pp. 139-143
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮೈಸೂರು ಸಂಸ್ಥಾನದಲ್ಲಿ ಗ್ರಾಮಾಡಳಿತ ಒಂದು ಅವಲೋಕನ

**ಶೃತಿ[1] ಮತ್ತು ಪ್ರೊ. ಎಂ.ಜಿ ಮಂಜುನಾಥ್[2]**

[1] ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

[2] ಕನ್ನಡ ಪ್ರಾಧ್ಯಾಪಕರು, ಹಾಸನ ಸ್ನಾತಕೊತ್ತರ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಹಾಸನ

**Abstract:**

*ಕರ್ನಾಟಕದ ಮಧ್ಯಕಾಲೀನ ಇತಿಹಾಸದಲ್ಲಿ ಮೈಸೂರು ಒಡೆಯರು ವಂಶದವರು ಬಹು ಮುಖ್ಯವಾದವರು. ಕ್ರಿ.ಶ. 1565ರ ತಾಳಿಕೋಟೆ ಯುದ್ಧದ ನಂತರ ವಿಜಯನಗರ ಸಾಮ್ರಾಜ್ಯವು ಅವನತಿಯ ಹಾದಿಯನ್ನು ಹಿಡಿದ ಸಂದರ್ಭದಲ್ಲಿ ಮೈಸೂರು ಒಡೆಯರು ಮುನ್ನೆಲೆಗೆ ಬಂದರು. ಕ್ರಿ.ಶ.1610ರಲ್ಲಿ ರಾಜ ಒಡೆಯರ್ ಅವರು ಶ್ರೀರಂಗಪಟ್ಟಣವನ್ನು ಆಕ್ರಮಿಸಿದ ನಂತರ ಮೈಸೂರು ಒಡೆಯರ ಕ್ರಮಬದ್ಧ ಇತಿಹಾಸ ಆರಂಭವಾಯಿತು. ಪ್ರಸ್ತುತ ಲೇಖನದಲ್ಲಿ ಮೈಸೂರು ಸಂಸ್ಥಾನದ ಗ್ರಾಮಾಡಳಿತ ಕುರಿತು ಅವಲೋಕಿಸಲಾಗಿದೆ.*

**Keywords:** *ಕರ್ನಾಟಕ ಇತಿಹಾಸ, ಸಾಹಿತ್ಯ, ಗ್ರಾಮಾಡಳಿತ, ಮೈಸೂರು ಸಂಸ್ಥಾನ, ಹದಿನಾಡು.*

**ಪೀಠಿಕೆ**

ಮೈಸೂರು ಒಡೆಯರ ಆರಂಭಕಾಲದ ಅರಸರ ಕುರಿತಾಗಿ ಹೆಚ್ಚಿನ ದಾಖಲೆಗಳು ಲಭ್ಯವಿಲ್ಲ. ಈ ಮನೆತನವು 14ನೇ ಶತಮಾನದ ಕೊನೆಯ ಭಾಗದಲ್ಲಿ ಆಡಳಿತ ಚುಕ್ಕಾಣಿ ಹಿಡಿದಿದ್ದರೂ, ಐತಿಹಾಸಿಕ ಕ್ರಮಬದ್ಧ ಆಧಾರಗಳು ಕೊರತೆ ಇದೆ. ಆದರೂ 1399 ರಿಂದ 1423ರ ವರೆಗಿನ ಆಳ್ವಿಕೆ ನಡೆಸಿದನೆಂದು ನಂಬಲಾಗಿರುವ ಯದುರಾಯನಿಂದ ಈ ವಂಶವು ಆರಂಭಗೊಂಡಿದೆ.

ಮೈಸೂರು ಒಡೆಯರ ಮೂಲದ ಕುರಿತಾಗಿ ಹಲವಾರು ಕಥನವನ್ನು ಕಾಣಬಹುದಾಗಿದೆ. 'ಶ್ರೀ ಮನ್ಮಹಾರಾಜರವರ ವಂಶಾವಳಿ' ಪ್ರಕಾರ ಇವರು ವೈಷ್ಣವ ಪಂಥಕ್ಕೆ ಸೇರಿದವರು ಎಂಬುದಾಗಿ ಕಂಠೀರವ ನರಸರಾಜ ಒಡೆಯರ ಆಸ್ಥಾನ ಕವಿ, ಗೋವಿಂದ ವೈದ್ಯ ಮತ್ತು ಚಿಕ್ಕದೇವರಾಜ ಒಡೆಯರ ಆಸ್ಥಾನ ಕವಿ ತಿರುಮಲಾರ್ಯರು ಇದನ್ನು ಬೆಂಬಲಿಸಿದ್ದಾರೆ.

ಕ್ರಿ.ಶ. 1838ರ ದೇವಚಂದ್ರನ 'ರಾಜಾವಳಿ ಕಥೆ' ಎಂಬ ಕೃತಿಯಲ್ಲಿ ಮೈಸೂರು ಒಡೆಯರನ್ನು ಜೈನ ಮೂಲದವರು ಇವರು ಹೊಯ್ಸಳ ವಿಷ್ಣುವರ್ಧನನ ವಂಶಸ್ಥರಾದ ದೇವರಾಜ ಮತ್ತು ಶಾಂತರಾಜ ಎಂದು ದಾಖಲಿಸಲಾಗಿದೆ. ಮಾರ್ಕ್ವಿಲ್ಸ್ ಅವರು ಮೈಸೂರು ಒಡೆಯರು ದೇವಗಿರಿಯ ಯಾದವ ಸಂತತಿಯವರೆಂದು ಆಲೋಚಿಸಿದರೆ, ಅಯ್ಯಂಗಾರ್ ಎಸ್.ಕೆ ರವರು ಹೊಯ್ಸಳ ವಂಶಸ್ಥರು ಅಥವಾ ವಾರಂಗಲ್ಲಿನ ಕಾಕತೀಯ ವಂಶಸ್ಥರು ಎಂದಿದ್ದಾರೆ. 1638ರ ಗೆಜ್ಜಿಗಾನಹಳ್ಳಿಯ ಶಾಸನವನ್ನು ಆಧರಿಸಿ ಮೈಸೂರು ಒಡೆಯರ್ ವಂಶಸ್ಥರು ದೇವಗಿರಿಯ ಯಾದವ ಸಂತತಿಗೆ ಸೇರಿರಬೇಕೆನ್ನುತ್ತಾರೆ.

***Please cite this article as:*** ಶೃತಿ ಮತ್ತು ಎಂ.ಜಿ ಮಂಜುನಾಥ್. (2025). ಮೈಸೂರು ಸಂಸ್ಥಾನದಲ್ಲಿ ಗ್ರಾಮಾಡಳಿತ ಒಂದು ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 3(6), 139–143

ಗೆಜ್ಜಿಗಾನಹಳ್ಳಿ ಶಾಸನದಲ್ಲಿ ಒಡೆಯರ್ ಮೂಲದ ಕುರಿತಾಗಿ ಹೀಗೆ ಹೇಳಲಾಗಿದೆ "ಗೋದಾವರಿ ತೀರದ ತೇಜಸ್ವಿಗಳಾದ ರಾಜಕುಮಾರರು ಮೊದಲು ರಾಜರಿಂದ ಗೌರವಧಾರಗಳೊಡನೆ ಕಳಿಸಲ್ಪಟ್ಟಿದ್ದರು. ಮತ್ತೆ ಕರ್ನಾಟಕದ ಭೂ ಭಾಗವನ್ನು ಪಡೆದು ಅದರ ರಕ್ಷಣೆಗಾಗಿ ಮೈಸೂರಿನಲ್ಲಿ ನೆಲೆಸಿದರು".

ಸಿ.ಹಯವದನರಾಯರು ಗುರುತಿಸಿರುವ ಹೇಳಿಕೆಗೂ ಮತ್ತು "ಮೈಸೂರು ನಗರದ ಪೂರ್ವೋತ್ತರ"ದಲ್ಲಿರುವ ಹೇಳಿಕೆಗೂ ಹೆಚ್ಚು ಹೋಲಿಕೆಗಳು ಕಂಡುಬರುತ್ತವೆ. ಆದರೂ ಇದರಲ್ಲಿಯೂ ಕೆಲವು ನ್ಯೂನ್ಯತೆಗಳಿವೆ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಮೈಸೂರು ಸಂಸ್ಥಾನದ ಅರಸರು ಜನ ಹಿತಕ್ಕಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಅವುಗಳಲ್ಲಿ ಆಡಳಿತ, ಆರ್ಥಿಕ, ಸಾಮಾಜಿಕ, ನೀರಾವರಿ ಬಹುಮುಖ್ಯವಾದವು. ಇವುಗಳ ಅನುಷ್ಠಾನಕ್ಕೆ ಗ್ರಾಮಗಳ ಸಹಾಯವು ನಿರಂತರವಾಗಿ ಅರಸುಗಳ ಪರವಾಗಿದ್ದರಿಂದಲೇ ಸುಸ್ಥಿರ ಆಡಳಿತ ನಡೆಸಲು ಸಾಧ್ಯವಾಯಿತು. ಆದ್ದರಿಂದ ಮೈಸೂರು ಕಾಲದಲ್ಲಿ ಇದ್ದಂತಹ ಗ್ರಾಮ ಆಡಳಿತ ಬಗ್ಗೆ ಅವಲೋಕನ ನಡೆಸುವುದು ಸೂಕ್ತವಾಗಿದೆ.

**ಮೈಸೂರು ಒಡೆಯರ ಕಾಲದಲ್ಲಿ ಗ್ರಾಮ ಆಡಳಿತ ವ್ಯವಸ್ಥೆ**

ಗ್ರಾಮಗಳು ಆರ್ಥಿಕತೆಯ ಬೆನ್ನೆಲುಬು. ಆದ್ದರಿಂದಲೇ ಗ್ರಾಮಗಳನ್ನು ಗಾಂಧೀಜಿಯವರು 'ಪುಟ್ಟ ಗಣರಾಜ್ಯಗಳು' ಎಂದು ಕರೆದಿದ್ದಾರೆ. ಮೈಸೂರು ಸಂಸ್ಥಾನವು ಆರಂಭವಾದದ್ದು 'ಹದಿನಾಡು' ಎಂಬ ಗ್ರಾಮದಿಂದಲೇ ಎಂಬುದು ಗಮನಾರ್ಹವಾದದ್ದು. ಗ್ರಾಮ ಆಡಳಿತ ಸುಗಮವಾಗಿ ಸಾಗಲು ಗ್ರಾಮದ ಎಲ್ಲರೂ ಸಹಕಾರವು ಅಗತ್ಯವಾಗಿತ್ತು. ಗೌಡ, ಪಟೇಲ, ಶಾನುಭೋಗರನ್ನು ಜಾತಿ ಪಂಚಾಯಿತಿ ಯಜಮಾನರು ಊರಿನ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ಮೈಸೂರು ಸಂಸ್ಥಾನದ ಗ್ರಾಮ ಆಡಳಿತ ವ್ಯವಸ್ಥೆಯಲ್ಲಿ ಬಹುಸಂಖ್ಯಾತ ಸಮುದಾಯಗಳು ಸ್ಥಳೀಯ ಗ್ರಾಮಾಧಿಕಾರಿಗಳಾದ ಪಟೇಲರು, ಶಾನುಭೋಗರು, ಶೇಖ್‌ದಾರರೊಂದಿಗೆ ನಿರಂತರವಾದ ಸಂಪರ್ಕವನ್ನು ಹೊಂದಿದ್ದರು. 1881ರಲ್ಲಿ ದಿವಾನ್ ರಂಗಾಚಾರ್ಲು ಅವರ ಮಾರ್ಗದರ್ಶನದಲ್ಲಿ ಆರಂಭವಾದ ಪ್ರಜಾಪ್ರತಿನಿಧಿ ಸಭೆಯ ವಾರ್ಷಿಕ ಸಭೆಯಲ್ಲಿ ಗ್ರಾಮ ಆಡಳಿತದ ಹಲವಾರು ವಿಷಯಗಳು ಚರ್ಚೆಗೆ ಒಳಪಡುತ್ತಿದ್ದವು. ಸದಸ್ಯರುಗಳ ಪರ ವಿರೋಧದ ಚರ್ಚೆಯು ಹೊರಬಂದು ಸರ್ಕಾರದ ಪರವಾಗಿ ದಿವಾನರು, ಇಲಾಖೆಯ ಮುಖ್ಯಸ್ಥರು ಉತ್ತರಗಳನ್ನು ನೀಡುವುದರೊಂದಿಗೆ ಗ್ರಾಮ ಆಡಳಿತದಲ್ಲಿ ಹಲವಾರು ನಿರ್ಣಯಗಳನ್ನು ಕೈಗೊಳ್ಳುತ್ತಿದ್ದರು.

**ಶಾನುಭೋಗರು**

ಪ್ರಜಾಪ್ರತಿನಿಧಿ ಸಭೆಯ ನಡಾವಳಿಗಳಲ್ಲಿ ದಾಖಲಿಸಿರುವಂತೆ ಶಾನುಭೋಗರು ಉನ್ನತ ಮಟ್ಟದ ಜವಾಬ್ದಾರಿಗಳನ್ನು ಹೊಂದಿರುತ್ತಿದ್ದರು. ಇವರು ಲೆಕ್ಕಪತ್ರಗಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊಂದಿದ್ದರು. ಇವರು ತಾಲೂಕು ಅಧಿಕಾರಿಗಳೊಂದಿಗೆ ಸಂಪರ್ಕ ಇಟ್ಟುಕೊಂಡು ಹಣದ ದುರುಪಯೋಗ ಆಗುವುದನ್ನು ತಡೆಯುವುದು ಹಾಗೂ ಗ್ರಾಮದ ನೌಕರರಿಗೆ ಸಂಬಳ ನೀಡುವ ಅಧಿಕಾರವನ್ನು ಹೊಂದಿದ್ದರು. ಇದಕ್ಕೆ ಸಂಬಂಧಿಸಿದಂತೆ 1908ರಲ್ಲಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಸದಸ್ಯರ ಅಭಿಪ್ರಾಯದಂತೆ ಸಂಬಳವನ್ನು 12 ರೂಪಾಯಿಗೆ ಏರಿಸಬೇಕೆಂದು ಮನವಿಯನ್ನು ಸಲ್ಲಿಸಿದರು. 1917ರಲ್ಲಿ ಶಾನುಭೋಗರ ಹುದ್ದೆಯು ಅನುವಂಶಿಕವಾಗಿಯೇ ಇರಬೇಕೆಂದು ಉಪ ಸಮಿತಿಯು ವರದಿ ನೀಡಿತ್ತು. ಶಾನಭೋಗರ ನೇಮಕಾತಿಯಲ್ಲಿ ಪರೀಕ್ಷೆಗಳನ್ನು ನಿಗದಿಪಡಿಸಬೇಕು ಮತ್ತು ವರ್ಗಾವಣೆಯಾಗಬೇಕು ಸಂಬಳವನ್ನು

ಅಧಿಕಗೊಳಿಸಬೇಕು ಎಂದು ಮನವಿಯನ್ನು ಸಲ್ಲಿಸಿದರು. 1864ರಲ್ಲಿ ನಿಗದಿಪಡಿಸಿದ ಪೋಟ್ಗೆಯ ಶ್ರೇಣಿಯು ಜಾರಿಯಲ್ಲಿದೆ. ಅವಶ್ಯಕ ವಸ್ತುಗಳ ಬೆಲೆಯು ಅಧಿಕವಾಗಿ, ಜೀವನ ನಿರ್ವಹಣ ವೆಚ್ಚವು ಹೆಚ್ಚಾಗಿರುತ್ತದೆ ಆದ್ದರಿಂದ ಸಂಬಳವನ್ನು ಅಧಿಕ ಮಾಡಬೇಕೆಂದು ಮನವಿ ಸಲ್ಲಿಸಿದ ಬಗ್ಗೆ ತಿಳಿದುಬರುತ್ತದೆ. ಶಾನುಭೋಗರು ತಮ್ಮ ಗ್ರಾಮಗಳ ವ್ಯಾಪ್ತಿಯಲ್ಲಿ ಸರ್ವಾಧಿಕಾರಿಗಳಾಗಿ ವರ್ತಿಸುವುದನ್ನು ಶ್ರೀ ರಸುಲ್ ಖಾನ್ ಅವರು ಸರ್ಕಾರದ ಗಮನಕ್ಕೆ ತಂದರು. ಆದರೆ ಈ ಪದ್ಧತಿಯನ್ನು ಬದಲಾಯಿಸಲಾಗುವುದಿಲ್ಲ ಎಂದು ಸರ್ಕಾರವು ಸ್ಪಷ್ಟಪಡಿಸಿತು.

**ಭೂ ಆಡಳಿತ ವ್ಯವಸ್ಥೆ**

ಗ್ರಾಮ ಎನ್ನುವುದು ಸುವ್ಯವಸ್ಥಿತವಾಗಿ ಬೆಳೆದ ಆರ್ಥಿಕ ರಚನೆಯಿಂದ ಕೂಡಿದ ಸ್ವಾವಲಂಬಿ ಘಟಕ. ಇಲ್ಲಿ ಸಮುದಾಯಗಳ ನಡುವೆ ಶ್ರಮ ವಿಭಜನೆ ಇರುತ್ತದೆ. ಬಡಗಿ, ಕಮ್ಮಾರ, ಕುಂಬಾರ, ಚಮ್ಮಾರ, ಕ್ಷೌರಿಕ, ದೋಬಿ, ಹಾಲು ಮಾರುವವನು ಇತ್ಯಾದಿ ಜನರು ಶತಮಾನಗಳಿಂದ ಗ್ರಾಮ ಆಡಳಿತಕ್ಕೆ ಕೊಡುಗೆಯನ್ನು ನೀಡುತ್ತಾ ಬಂದಿದ್ದಾರೆ. ಇದರಲ್ಲಿ ಹೆಚ್ಚಿನ ಸಮುದಾಯಗಳು ಹಿಂದೆ ಇದ್ದಂತಹ 'ಹಡದಿ' ಪದ್ಧತಿಗೆ ಒಳಗಾಗಿದ್ದರು. ಈ ಪದ್ಧತಿಯ ಮುಖಾಂತರ ಒಬ್ಬ ಒಂದು ವರ್ಷದ ತನಕ ದುಡಿದು ವರ್ಷದ ಕೊನೆಯಲ್ಲಿ ಅಂದರೆ ಯುಗಾದಿ ಹಬ್ಬದ ಮುನ್ನ ದಿನ ತನ್ನ ಉಳಿದ ಎಲ್ಲಾ ಸಂಬಳವನ್ನು ಪಡೆಯುತ್ತಿದ್ದರು.

ರೈತರು ಹೊಂದಿದ್ದ ಜಮೀನುಗಳ ವಿಸ್ತೀರ್ಣದಲ್ಲಿ ವ್ಯತ್ಯಾಸಗಳಿದ್ದವು. ನಂತರದಲ್ಲಿ ಬರುವವರು ಭೂ ರಹಿತರು. ಭೂ ರಹಿತರು ಭೂಮಿ ಒಡೆಯರಿಗೆ ಕೃಷಿ ಕಾರ್ಯಗಳಲ್ಲಿ ಸಹಾಯ ಮಾಡುತ್ತಿದ್ದರು. ಜಮೀನ್ದಾರರ ಭೂಮಿಯಲ್ಲಿ ಉಳುಮೆ ಮಾಡಲು ಭೂರಹಿತ ವರ್ಗದವರ ನೆರವು ಅವಶ್ಯಕವಾಗಿತ್ತು. ಭೂ ರಹಿತರು ಕೂಲಿ ಆಳುಗಳಾಗಿ ದುಡಿದು ಅತಿ ಹೆಚ್ಚು ಶೋಷಣೆಗೆ ಒಳಗಾದವರಾಗಿದ್ದರು. ಮೈಸೂರು ಸಂಸ್ಥಾನದಲ್ಲಿ ವಿವಿಧ ರೀತಿಯ ಗುಲಾಮರನ್ನು ಮಾರಾಟ ಮಾಡಲಾಗುತ್ತಿತ್ತು. ಗುಲಾಮಳಾದ ಮನೆ ಕೆಲಸದವಳ ಬೆಲೆ 5 ರಿಂದ 12 ಟಂಕಗಳು, ವೇಶ್ಯೆಯ ಬೆಲೆ 20 ರಿಂದ 40 ಟಂಕಗಳು, ಒಬ್ಬ ಗುಲಾಮನ ಬೆಲೆ 20 ರಿಂದ 30 ಟಂಕಗಳು, ಉತ್ತಮ ದರ್ಜೆಯ ಕೆಲವು ಗುಲಾಮರನ್ನು 100 ಟಂಕದಿಂದ 200 ಟಂಕದವರೆಗೂ ಮಾರಾಟ ಮಾಡಲಾಗುತ್ತಿತ್ತು. ವೇಶ್ಯೆರನ್ನು ಬಹಳ ಖರ್ಚು ಮಾಡಿ ಅತ್ಯಂತ ಎಚ್ಚರಿಕೆಯಿಂದ ಸಾಕಿ ಬೆಳೆಸುತ್ತಿದ್ದರು. ಕುಶಲಕರ್ಮಿಗಳ ಕುಟುಂಬಗಳಿಗೆ ಗ್ರಾಮದ ಬೆಳೆಯಲ್ಲಿ ನಿಗಧಿತ ಪ್ರಮಾಣದಲ್ಲಿ ಪಾಲುಕೊಟ್ಟು, ಅವರ ಜೊತೆ ವಸ್ತುವಿನ ಮೂಲಕ ವ್ಯವಹಾರ ನಡೆಸುತ್ತಿದ್ದರು. ಅದರ ಜೊತೆಗೆ ಹೆಚ್ಚುವರಿ ಕೆಲಸ ಮಾಡಿಸಿಕೊಂಡರೆ ಅವರಿಗೆ ನಗದು ರೂಪದಲ್ಲಿ ಅಥವಾ ಉತ್ಪನ್ನಗಳ ರೂಪದಲ್ಲಿ ಕೊಡುವ ಪದ್ಧತಿಯು ರೂಢಿಯಲ್ಲಿತ್ತು.

ಕೃಷಿ ಮತ್ತು ನೇಯ್ಗೆ ವೃತ್ತಿಯನ್ನು ಆಯ್ದುಕೊಂಡವರು ಹಾಗೂ ಕುಶಲಕರ್ಮಿಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುವುದು ಕಡಿಮೆ. ವೃತ್ತಿ ಸಂಘಗಳು ಜಾತಿ ಪದ್ಧತಿಯ ಮೇಲೆ ಆಧಾರಿತವಾದ ವೃತ್ತಿಪರ ಸಂಘಟನೆಯಾಗಿದೆ. ಒಂದು ವೃತ್ತಿಯನ್ನು ಅನುಸರಿಸುವವರು ಮತ್ತು ಒಂದು ನಿರ್ದಿಷ್ಟ ಸಮುದಾಯಕ್ಕೆ ಸೇರಿದವರು ತಮ್ಮದೇ ಆದ ಜಾತಿ ಆಧಾರಿತ ವೃತ್ತಿ ಸಂಘಗಳನ್ನು ಕಟ್ಟಿಕೊಳ್ಳುತ್ತಿದ್ದರು.

1630ರಲ್ಲಿ ಮೈಸೂರು ಪ್ರಾಂತ್ಯದಲ್ಲಿ ಭೀಕರ ಕ್ಷಾಮ ಉಂಟಾಯಿತು. ಇದರಿಂದಾಗಿ ಕ್ಷಾಮದ ಸಂಕಷ್ಟಕ್ಕೆ ಒಳಗಾದ ಜನರ ಜೀವನ ದುಸ್ತರವಾಯಿತು. ಭೂಮಿಯನ್ನು ಉಳುವವರು ಇರಲಿಲ್ಲ. ಹೆದ್ದಾರಿಗಳು ಶವಗಳಿಂದ ತುಂಬಿತ್ತು. ಜನರಿಗೆ ರೊಟ್ಟಿಯ ತುಂಡನ್ನು ಕೊಡುವವರಿಲ್ಲ. ಜನರು ತುಂಡು ರೊಟ್ಟಿಗಾಗಿ ಜೀವ ತೆರಲು ಸಿದ್ಧರಾಗಿದ್ದರು ಎಂದು ತಿಳಿದುಬರುತ್ತದೆ.

ಗ್ರಾಮ ಆಡಳಿತದ ತಳಮಟ್ಟದಲ್ಲಿ ತೋಟಿ, ತಳವಾರ, ಊಳಿಗ, ನೀರು ಗಂಟಿ, ಓಲೆಕಾರ ಮುಂತಾದ ಹೆಸರಿನ ಸೇವಕರಿದ್ದರು. ಗ್ರಾಮದ ವ್ಯಾಪ್ತಿಯ ಗಡಿಗಳನ್ನು ಕಾಯುವುದು ಹಾಗೂ ಗ್ರಾಮದ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವುದು ಇವರ ಕಾಯಕವಾಗಿತ್ತು. ಇವರು ಗೌಡ, ಶಾನುಭೋಗರ ಅಧೀನದಲಿದ್ದರೂ ಗ್ರಾಮದ ನಿರ್ದಿಷ್ಟ ಕೆಲಸ ನಿರ್ವಹಿಸುವ ಸೇವಕರು. ಈ ಹುದ್ದೆಗಳು ವಂಶಪಾರಂಪರ್ಯವಾಗಿ ಇರುತ್ತಿದ್ದವು.

ರೈತರಿಗೆ ಸೋಮವಾರ ಬಿಡುವಿನ ದಿನವಾಗಿತ್ತು. ಇಂತಹ ದಿನಗಳಲ್ಲಿ ಕ್ಷೌರಿಕರು ಊರಿಂದ ಊರಿಗೆ ಉದ್ಯೋಗಕ್ಕಾಗಿ ಬರುತ್ತಿದ್ದರು. ಇದಲ್ಲದೆ ಹಬ್ಬ, ಜಾತ್ರೆ, ಮದುವೆ ಮುಂತಾದ ವಿಶೇಷ ದಿನಗಳಂದು ಜನರಿಗೆ ಸೇವೆಯನ್ನು ನೀಡುತ್ತಿದ್ದರು. ಇದಕ್ಕಾಗಿ ಹಣ ಅಥವಾ ಧಾನ್ಯದ ರೂಪದಲ್ಲಿ ಸಂಬಳ ಪಡೆಯುತ್ತಿದ್ದರು. ಈತನು ಕೂಡ ಗೌಡ ಮತ್ತು ಶಾನುಭೋಗರಿಗೆ ಹಡದಿ ಮೂಲಕ ಕ್ಷೌರ ವೃತ್ತಿಯನ್ನು ಮಾಡುತ್ತಿದ್ದನು.

**ಗ್ರಾಮಾಡಳಿತದಲ್ಲಿ ನ್ಯಾಯ ವ್ಯವಸ್ಥೆ**

ಗ್ರಾಮಗಳಲ್ಲಿ ಅಥವಾ ಗ್ರಾಮ ಗ್ರಾಮಗಳ ನಡುವೆ ವ್ಯಾಜ್ಯ ಉಂಟಾದಾಗ ಗ್ರಾಮದ ಚಾವಡಿ ಅಥವಾ ಊರಿನ ಪ್ರಮುಖ ದೇವಾಲಯದಲ್ಲಿ ನ್ಯಾಯ ತೀರ್ಮಾನ ಮಾಡುವ ಪದ್ಧತಿ ಇತ್ತು. ಹಳ್ಳಿಗಳಲ್ಲಿ ಪಂಚಾಯಿತಿಗೆ ಬಹಳ ಪ್ರಾಮುಖ್ಯತೆ ಇತ್ತು. ಇಂದಿಗೂ ಇದೆ. ಈ ಪಂಚಾಯಿತಿಯ ಮುಖಾಂತರವಾಗಿ ಜಮೀನುಗಳ ವ್ಯಾಜ್ಯ ಹಾಗೂ ಹಣಕಾಸಿನ ವ್ಯವಹಾರವನ್ನು ತೀರ್ಮಾನ ಮಾಡಲಾಗುತ್ತಿತ್ತು. ತಪ್ಪಿತಸ್ಥರಿಗೆ ದಂಡವನ್ನು ವಿಧಿಸಲಾಗುತ್ತಿತ್ತು. ದಂಡದ ಹಣವನ್ನು ದೇವಾಲಯಗಳ ಜೀರ್ಣೋದ್ಧಾರ ಹಾಗೂ ಇತರೆ ಸಾರ್ವಜನಿಕ ಕಾರ್ಯಗಳಿಗೆ ಬಳಸುತ್ತಿದ್ದರು. ಗಲಾಟೆಗಳಾದಾಗ ಗಾಯಗೊಂಡವರಿಗೆ ದಂಡದ ಸ್ವಲ್ಪ ಭಾಗವನ್ನು ಉಪಚಾರಕ್ಕಾಗಿ ನೀಡುತ್ತಿದ್ದರು.

ಲೈಂಗಿಕ ಅಪರಾಧಗಳಾದಾಗ ಹುಡುಗ–ಹುಡುಗಿ ಮದುವೆಯಾಗದೆಯಿದ್ದು ಅವರು ಒಂದೇ ಜಾತಿಯವರಾಗಿದ್ದರೆ ಇಬ್ಬರಿಗೂ ವಿವಾಹ ಮಾಡಿಸುತ್ತಿದ್ದರು. ಒಂದು ವೇಳೆ ಹುಡುಗ–ಹುಡುಗಿ ಬೇರೆ ಜಾತಿ ಸಮುದಾಯಗಳಿಗೆ ಸೇರಿದವರಾಗಿದ್ದರೆ ವಿಚಾರಣೆ ನಡೆಸಿ ಇಬ್ಬರಿಗೂ ದಂಡ ವಿಧಿಸಲಾಗುತ್ತಿತ್ತು. ಹುಡುಗಿ ಅಸ್ಪೃಶ್ಯ ಸಮುದಾಯದವಳಾಗಿದ್ದು ಹುಡುಗ ಇತರೆ ಸಮುದಾಯಕ್ಕೆ ಸೇರಿದ್ದರೆ, ಅಂತಹ ಸಂದರ್ಭದಲ್ಲಿ ಅವಳಿಗೆ ಹಣವನ್ನು ನೀಡಲಾಗುತ್ತಿತ್ತು. ಇದಕ್ಕೆ ಗಂಡು ಒಪ್ಪದೇ ಇದ್ದಾಗ ಅವಳ ಜೊತೆಯೇ ಹೋಗುತ್ತೇನೆ ಎಂದಾಗ ಕಳುಹಿಸಿಕೊಡುತ್ತಿದ್ದರು. ಆದರೆ ಆತನ ಜಾತಿಯವರು ಆತನನ್ನು ಜಾತಿ ಪಂಚಾಯಿತಿಯಿಂದ ಹೊರಗೆ ಇಡುತ್ತಿದ್ದರು.

ನ್ಯಾಯ ತೀರ್ಮಾನಕ್ಕೆ ಹಳ್ಳಿಯ ಪಂಚಾಯಿತಿ ಅಲ್ಲದೆ ಅದಕ್ಕೂ ಮೇಲೂ ಸ್ಥರದ ನ್ಯಾಯಸ್ಥಾನಗಳು ಇದ್ದವು. ಗ್ರಾಮದ ನ್ಯಾಯ ಪಂಚಾಯಿತಿಯಲ್ಲಿ ನೀಡಿದ ತೀರ್ಮಾನವು ಅಸಮಾಧಾನವಾಗಿದ್ದರೆ ಅವರು ನಾಡಗೌಡರ ಬಳಿ ಹೋಗಿ ತಮ್ಮ ಅಹವಾಲನ್ನು ದಾಖಲು ಮಾಡುತ್ತಿದ್ದರು. ನಾಡಗೌಡರೆಂದರೆ ಒಂದು ನಿರ್ದಿಷ್ಟ ಹಳ್ಳಿಗಳ ಗುಂಪಿನ ಯಜಮಾನರೆಂದು ಜನ ಒಪ್ಪಿಕೊಂಡವರಾಗಿದ್ದರು. ಈತ ಸಕಲ ಸೌಕರ್ಯಗಳಿಂದಲೂ ಅನುಕೂಲಸ್ಥನಾಗಿದ್ದನು. ಈತನ ಮಾತು ನಿರ್ದಿಷ್ಟ ಗುಂಪಿನ ಹಳ್ಳಿಗಳಿಗೆ ವೇದವಾಕ್ಯವಾಗಿತ್ತು. ಇಲ್ಲಿನ ನ್ಯಾಯದಲ್ಲಿಯೂ ಅಸಮಾಧಾನ ಉಂಟಾದರೆ ಮೇಲು ನಾಡಗೌಡನ ಬಳಿ ಹೋಗುತ್ತಿದ್ದರು. ಅಲ್ಲಿಯೂ ತೃಪ್ತಿ ಹೊಂದದೆ ಹೋದರೆ ಸರ್ಕಾರದ ಕೋರ್ಟಿಗೆ ಹೋಗಬೇಕಾಗಿತ್ತು.

**ಭೂ ಸಂಬಂಧಿ ವಸೂದೆಗಳು**

ಮೈಸೂರು ಸಂಸ್ಥಾನದಲ್ಲಿ ಮದ್ರಾಸ್ ಮತ್ತು ಮುಂಬೈ ಪ್ರಾಂತ್ಯಗಳಲ್ಲಿ ಜಾರಿಯಲ್ಲಿದ್ದ ಭೂ ಕಂದಾಯ ಕಾಯಿದೆಯನ್ನು ಅಧ್ಯಯನ ನಡೆಸಲು ಮೈಸೂರು ಒಡೆಯರು ವಿಶೇಷ ಅಧಿಕಾರಿಗಳನ್ನು

ಕಳುಹಿಸಿ, ಅದೇ ಮಾದರಿಯ ಭೂ ಕಂದಾಯ ವ್ಯವಸ್ಥೆಯನ್ನು ಇಲ್ಲಿಯೂ ಅಳವಡಿಸಿಕೊಳ್ಳಲಾಯಿತು. ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ 1883–84ರವರೆಗೂ ಅಧಿವೇಶನಗಳಲ್ಲಿ ಭೂ ಕಂದಾಯ ವ್ಯವಸ್ಥೆಯ ಬಗ್ಗೆ ಚರ್ಚೆಗಳು ನಡೆದವು. 1888ರಲ್ಲಿ 'ಮೈಸೂರು ಲ್ಯಾಂಡ್ ರೆವೆನ್ಯೂ ಕೋಡ್' ಸಂಸ್ಥಾನದಾದ್ಯಂತ ಜಾರಿಗೆ ಬಂದಿತು. ಈ ಕಾಯ್ದೆಯು 1891, 1892, 1905, 1909, 1916, 1922 ವರ್ಷಗಳಲ್ಲಿ ಪರಿಷ್ಕರಣೆಗೆ ಒಳಗಾಯಿತು.

1890ರಲ್ಲಿ 'ಮೈಸೂರು ಲ್ಯಾಂಡ್ ಅಂಡ್ ರೆವೆನ್ಯೂ ಕೋಡ್'ನ್ನು ಪ್ರಥಮ ಬಾರಿಗೆ ಪ್ರಕಟಿಸಲಾಯಿತು. ಇದರ ಪರಿಷ್ಕರಣೆ ಕಾರ್ಯ 1901ರಲಾಯಿತು. 1902ರಲ್ಲಿ 'ರವೀನ್ಯೂ ಕಮೀಷನರ್' ಎಂಬ ಹುದ್ದೆಯನ್ನು ಸೃಷ್ಟಿಸಿ, ಅಧಿಕಾರಿಯನ್ನು ನೇಮಿಸಲಾಯಿತು. ಇವರಿಗೆ 1903ರ ನಂತರ ಹೆಚ್ಚಿನ ಅಧಿಕಾರವನ್ನು ನೀಡಲಾಯಿತು. ಇವರ ಕೈ ಕೆಳಗೆ ಜಿಲ್ಲೆಯಲ್ಲಿ ಡೆಪ್ಯುಟಿ ಮತ್ತು ಅಸಿಸ್ಟೆಂಟ್ ಕಮಿಷನರ್‌ಗಳು ಮತ್ತು ಅಮಲ್ದಾರರು ರೆವೆನ್ಯೂ ಇಲಾಖೆಯಲ್ಲಿ ಅಧಿಕಾರವನ್ನು ಪಡೆದರು. 1888ರ ನಂತರ ಜಾರಿಗೆ ಬಂದ ಹಲವು ಕಾಯ್ದೆಗಳು ಭೂ ಹಿಡುವಳಿದಾರರಿಗೆ ರಕ್ಷಣೆ ನೀಡುವುದರ ಜೊತೆಗೆ ಸಾಮಾಜಿಕ ಜವಾಬ್ದಾರಿಯನ್ನು ವಹಿಸಿದವು. 'ಲ್ಯಾಂಡ್ ರೆವೆನ್ಯೂ ಕೋಡ್'ನ 77ನೇ ವಿಧಿಯ ಪ್ರಕಾರ ಯಾವುದೇ ಭೂ ಹಿಡುವಳಿದಾರನು ತನ್ನ ಹಿಡುಗಳನ್ನು ಪರಭಾರೆ ಮಾಡಿದಾಗ ಡೆಪ್ಯೂಟಿ ಕಮಿಷನರ್ ಅವರು ಪರಭಾರೆಯಾದ ಭೂ ಹಿಡುವಳಿಯ ಬಗ್ಗೆ ಸರ್ಕಾರದ ವತಿಯಿಂದ ಸಂಬಂಧಿಸಿದ ಹಿಡುವಳಿದಾರನಿಗೆ ಮಾಹಿತಿ ನೀಡುವ ಕ್ರಮ ಜಾರಿಗೆ ಬಂದಿತು.

ಹೀಗೆ ಮೈಸೂರು ಸಂಸ್ಥಾನದಲ್ಲಿ ಗ್ರಾಮ ಆಡಳಿತ ಭಾಗವಾಗಿ ನ್ಯಾಯ ಪದ್ಧತಿ, ಭೂ ಹಿಡುವಳಿಯ ಕುರಿತಾಗಿ ಸರ್ಕಾರ ಕೈಗೊಂಡಿದ್ದ ಕ್ರಮಗಳನ್ನು ಮೇಲಿನಂತೆ ಕಾಣಬಹುದಾಗಿದೆ.

**ಆಕರ ಗ್ರಂಥಗಳು**


- ಬಸವರಾಜಪ್ಪ, ಹೆಚ್.ಇ. (2000). ಮೈಸೂರು ಸಂಸ್ಥಾನದ ಒಂದು ಭೂ ದಾಖಲೆ. *ಇತಿಹಾಸ ದರ್ಶನ– ಸಂ.15.* ಕರ್ನಾಟಕ ಇತಿಹಾಸ ಅಕಾಡೆಮಿ.
- ಮೈಸೂರು ಗೆಜೆಟ್ (1888, ಮಾರ್ಚ್ 5)
- ಮೈಸೂರು ಲ್ಯಾಂಡ್ ರೆವಿನ್ಯೂಗೆ ಕೋಡ್ ಗೆ ಅನುಸಾರವಾಗಿ ರಚಿಸಿದ ನಿಬಂಧನೆಗಳು–ಪುಟ ಸಂ.120,125
- ನಾಗರಾಜು, ಟಿ.ವಿ. (2008). *ಮೈಸೂರು ಸಂಸ್ಥಾನದಲ್ಲಿ ನೀರಾವರಿ.* ಜನನಿ ಪ್ರಕಾಶನ.
- ಪ್ರಾನ್ಸಿಸ್ ಬುಕಾನನ್. ಜರ್ನಿ ಫ್ರಮ್ ಮದ್ರಾಸ್ ಥ್ರೂ ದ ಕಂಟ್ರೀಸ್ ಆಫ್ ಮೈಸೂರು– ಸಂ.,1
- ಶಿವಣ್ಣ. ಮಧ್ಯಕಾಲೀನ ಭಾರತದ ಆರ್ಥಿಕ ಇತಿಹಾಸ